ಶ್ರೀ ಎಫ್. ಎಸ್. ಪಾಟೀಲ್.—ಸ್ವಾಮಿ ನನ್ನ (ಬ) ಪ್ರಶ್ನೆಗೆ ಉತ್ತರವಾಗಿ ನಬ್ ಸೆಂಟರು ಗಳು ಮುಂಜೂರಾಗಿವೆ ಎಂದು ಹೇಳಿದ್ದೀರಿ, ಈ ನಬ್ ಸೆಂಟರುಗಳು ಸರ್ಕಾರದಿಂದ ಯಾವಾಗ ಮುಂಜೂರಾದುವು ಮತ್ತು ಈ ಮೂರು ನಬ್ ಸೆಂಟರುಗಳಿಗೂ ಯಾವ ಯಾವ ಸೌಲಭ್ಯಗಳನ್ನು ಕೊಟ್ಟಿದ್ದೀರಿ, ಹಾಗೂ ಈ ನಬ್ ಸೆಂಟರುಗಳಿಗೆ ಸರ್ಕಾರದವರು ಬಿಲ್ಡಿಂಗ್ ಕಟ್ಟಿಸಿದ್ದಾರೆಯೇ ಸ್ವಾಧೀನ್ ಕ್ವಾರ್ಟರ್ಸ್ ಕಟ್ಟಿಸಿದ್ದಾರೆಯೇ ಇದಕ್ಕೆ ಎಷ್ಟು ಹಣ ಮುಂಜೂರಾಗಿದೆ ?

† ಶ್ರೀ ವೈ. ರಾಮಕೃಷ್ಣ.—ಇದಕ್ಕೆ ಮುಂಜೂರಾತಿಯನ್ನು ಕೊಟ್ಟದ್ದು 1961ನೇ ಇಸವಿ ಯಲ್ಲಿ. ಆದರೆ ಅಲ್ಲಿ ಇನ್ನೂ ಕೆಲಸ ಪ್ರಾರಂಭವಾಗಿಲ್ಲ. ಅದಕ್ಕೆ ಕಾರಣವೇನೆಂದರೆ ಆ ಟ್ರೇನಿಂಗಿಗೆ ಟೀಚ್ ಮಾಡತಕ್ಕ ಡಾಕ್ಟರು ಸಿಕ್ಕುವುದು ಕಷ್ಟವಾಗಿರುವುದರಿಂದ ಅಲ್ಲಿ ಕೆಲಸಕಾರ್ಯಗಳು ಪ್ರಾರಂಭವಾಗಿಲ್ಲ. ಆ ಟ್ರೇನಿಂಗೆ ಟೀಚ್ ಮಾಡತಕ್ಕವರು ಬಂದಮೇಲೆ ನಬ್ ಸೆಂಟರು ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡುತ್ತೇವೆ.

ಶ್ರೀ ಸಿ. ಎಂ. ಜುರ್ಚಿಹಾಳ್ ಮಿಸ್.—ಆ ಟ್ರೇನಿಂಗ್ ಸೆಂಟರು ಪ್ರಾರಂಭವಾಗಿಲ್ಲವೇ, ಅಲ್ಲಿ ಡಿಸ್‌ಪೆನ್ಸರಿ ನಡೆಯುತ್ತಿಲ್ಲವೇ ?

ಶ್ರೀ ವೈ. ರಾಮಕೃಷ್ಣ.—ನಬ್ ಸೆಂಟರು ಇನ್ನೂ ಸ್ಟಾರ್ಟ್ ಆಗಿಲ್ಲ.

ಶ್ರೀ ಎಫ್. ಎಸ್. ಪಾಟೀಲ್.—ಡೇವಿ ಕೊಪ್ಪ, ತಬಕಡಹೊನ್ನಾಳಿ ಮತ್ತು ದುಮ್ಮವಾಡ ಈ ಮೂರು ಊರುಗಳಲ್ಲಿ ಈಗಾಗಲೇ ಜೂನಿಯರ್ ಹೆಲ್ತ್ ಇನ್‌ಸ್ಪೆಕ್ಟರುಗಳು, ಕಾಂಪೌಂಡರು ಮತ್ತು ನರ್ಸ್‌ಗಳು ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಈಗ ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದು ನಿಜವೇ ಅಥವಾ ಅಲ್ಲಿ ಕೆಲಸ ಮಾಡುತ್ತಿರುವುದು ನಿಜವೇ ಸ್ಪಲ್ಪ ಕ್ಲಾರಿಫೈ ಮಾಡಬೇಕು.

ಶ್ರೀ ವೈ. ರಾಮಕೃಷ್ಣ.—ಎಂ. ಬಿ. ಬಿ. ಎಸ್. ಪಾಸು ಮಾಡಿದ ವಿದ್ಯಾರ್ಥಿಗಳಿಗೆ 3 ತಿಂಗಳು ಟ್ರೇನಿಂಗ್ ಕೊಡುವ ಬಗ್ಗೆ ಕೊಡಬೇಕಾದಂತಹ ಸಿಬ್ಬಂದಿಯ ಬಗ್ಗೆ ನಾನು ಹೇಳಿದ್ದು.

Allotment of lands to Harijans and Girijans in Shimoga District

204. Sri ABDUL KHUDDUS ANWAR (Bhadravati).—

Will the Minister for Revenue be pleased to state :—

(*a*) the extent of Revenue lands allotted to the landless Harijans, Girijans during the last 4 years in Shimoga District ;

(*b*) the Public Works Department Kharab Lands available in B. H. Road (near Kadadakatte village) ;

(*c*) whether in spite of the complaints to the local Deputy Commissioner, the Panchayat's Chairman had disposed off these lands to his servants and relatives and has made a thousands of Rupees without remitting any amount to the Panchayat accounts ?

Sri H. V. KOUJALGI (Minister for Revenue).—

(*a*)—

	Acres	*Guntas*
Harijans	3,652	37
Girijans	145	13

(*b*) 2 Acres and 37 guntas.

(*c*) The matter is before the Court of Munsiff, Bhadravati.

(SRI H. V. KOUJALGI)

I want to state in respect of answer given to question (*c*). It is true that out of 2 acres 37 guntas, 1 acre and 28 guntas was unauthorisedly taken by the Panchayat and converted into plots and sold. When the Assistant Commissioner took objection a suit has been filed.

Sri ABDUL KHUDDUS ANWAR.—The suit is filed in connection with the demolition of the building. But my complaint is with regard to the Chairman unauthorisedly disposing of lands and making money for himself. Will the Government arrange to take back the land and distribute it to the Harijans to whom it is earmarked ?

Sri H. V. KOUJALGI.—The Chairman has sold them in public auction. I do not know whether he has made money or not. When the Assistant Commissioner wanted to remove the unauthorised occupation, a suit has been filed and a general injunction has been issued.

Sri ABDUL KHUDDUS ANWAR.—The injunction is with regard to the building. With regard to the other vacant land, will the Government consider to give those lands to Harijan people who are homeless ?

Sri H.V. KOUJALGI.—According to my informantion a general stay in respect of that area has been given. I will enquire into what my hon. friend says. The Assistant Commissioner has already taken action to remove those occupants and a suit is filed.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—(ಅ) ಪ್ರಶ್ನೆಗೆ ಉತ್ತರವಾಗಿ ಹರಿಜನರಿಗೆ 3,652 ಎಕರೆಗಳನ್ನು ಗಿರಿಜನರಿಗೆ 145 ಎಕರೆಗಳನ್ನು ಹಂಚರಾಗಿದೆ ಎಂದು ಹೇಳಿದ್ದೀರಿ. ಈ ಅಂಕಿಅಂಶಗಳಲ್ಲಿ ಭದ್ರಾವತಿಯಲ್ಲಿರತಕ್ಕಂಥ ಹರಿಜನರ ಸೇವಕ್ ಸಂಘಕ್ಕೆ ಕೊಟ್ಟಿರುವ ಜಮೀನು ಕೂಡ ಸೇರಿದೆಯೇ, ಸೇರಿದ್ದರೆ ಅದರ ವಿಸ್ತೀರ್ಣ ಎಷ್ಟು ಮತ್ತು ಅವರಿಗೆ ಸಾಗುವಳಿ ಚೀಟಿ ಕೊಟ್ಟಿದ್ದೀರಾ ?

ಶ್ರೀ ಎಚ್. ವಿ. ಕೌಜಲಗಿ.—ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

ಶ್ರೀ ಎಸ್. ಶ್ರೀಕಂಠಯ್ಯ.—(ಇ) ಪ್ರಶ್ನೆಗೆ ಉತ್ತರವಾಗಿ ಮುನ್ಸೀಫ್ ನ್ಯಾಯಾಲಯದಲ್ಲಿ ಇತ್ಯರ್ಥವಾಗಬೇಕಾಗಿದೆ ಎಂದು ಹೇಳಿದ್ದೀರಿ. ಈ ರೀತಿ ದುರುಪಯೋಗವಾಗಿದೆ ಎಂದು ಕಂಡು ಬಂದ ಮೇಲೆ ಇರಾಖಾ ತನಿಖೆಯನ್ನು ಮಾಡಲಾಯಿತೇ ?

ಶ್ರೀ ಎಚ್. ವಿ. ಕೌಜಲಗಿ.—ತನಿಖೆಯನ್ನು ಮಾಡಿಸಿ, ದುರುಪಯೋಗವಾಗಿದೆ ಎಂದು ಕಂಡುಬಂದಮೇಲೆ ಪಂಚಾಯಿತಿಯವರು ಮಾಡಿದ ನಿರ್ಣಯವನ್ನು ರದ್ದುಪಡಿಸಿ, ಅತಿಕ್ರಮ ಮಾಡಿದ ವರ ಬಗ್ಗೆ ಕ್ರಮ ತೆಗೆದುಕೊಳ್ಳಲು ನ್ಯಾಯಾಲಯಕ್ಕೆ ಬಿಡಲಾಗಿದೆ.

ಶ್ರೀ ಎನ್. ಜಿ. ಹಾಲಪ್ಪ.—ಕಳೆದ ನಾಲ್ಕು ವರ್ಷಗಳಲ್ಲಿ ಕೇವಲ 3 ಸಾವಿರ ಎಕರೆಗಳಷ್ಟು ಜಮೀನನ್ನು ಹರಿಜನರಿಗೆ ಹಂಚಿರುವುದು ನಾಚಿಕೆಗೇಡಿನ ಪ್ರಸಂಗವೆಂದು ಹೇಳಬಹುದು. ಭದ್ರಾವತಿ ತಾಲ್ಲೂಕ್‌ನಲ್ಲಿ ಕೆಲವು ಏರಿಯಾವನ್ನು ಮುಳುಗಡೆಯಾದ ಪ್ರದೇಶದವರಿಗೆ ಕೊಡಲು ರಿಜರ್ವ್ ಮಾಡಿ ಇಟ್ಟಿದ್ದೀರಿ. ಆ ಏರಿಯದಲ್ಲಿ 25 ಭಾಗವನ್ನು ಹರಿಜನ-ಗಿರಿಜನರಿಗೆ ಕೊಡಬೇಕೆಂದು ಇದೆ. ಆದರೆ ನಿಮ್ಮ ಅಧಿಕಾರಿಗಳು ಅವರಿಗೆ ಸಿಗದಂತೆ ಮಾಡಿದ್ದಾರೆ. ಆದಷ್ಟು ಜಾಗ್ರತೆ ಆ 25 ಭಾಗದ ಜಮೀನನ್ನು ಹರಿಜನ-ಗಿರಿಜನರಿಗೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಅಧ್ಯಕ್ಷರು.—ಈ ಪ್ರಶ್ನೆಗೆ ಸಂಬಂಧಪಡುವುದಿಲ್ಲ.

ಶ್ರೀ ಜಿ. ದುಗ್ಗಪ್ಪ.—ಬೆಂಗಳೂರು ಹೊನ್ನಾವರ ರಸ್ತೆಯಲ್ಲಿ ಕಡದಕಟ್ಟೆ ಗ್ರಾಮದ ಬಳಿ ಚಿತ್ರದುರ್ಗ ಜಿಲ್ಲೆಯ ಕೆಲವು ಹರಿಜನರು ಹೋಗಿ ಗುಡಿಸಲು ಹಾಕಿಕೊಂಡು ಕಳೆದ 8-10 ವರ್ಷಗಳಿಂದ ವಾಸ ಮಾಡುತ್ತಿದ್ದರು. ಮತ್ತು ಅವರು ತಾವು ಉಳುಮೆ ಮಾಡುತ್ತಿರುವ ಜಮೀನನ್ನು ತಮಗೆ ಮಂಜೂರು ಮಾಡಬೇಕೆಂದು ರೆವಿನ್ಯೂ ಅಧಿಕಾರಿಗಳನ್ನು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿಕೊಂಡಿದ್ದಾರೆ, ಅದು ನಿಜವೇ ಮತ್ತು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಹೇಳಿದಂತಹ ಜಾಗದಲ್ಲಿ ಚಿತ್ರದುರ್ಗ ತಾಲ್ಲೂಕಿನಿಂದ ಬಂದು ಇರುವ ಹರಿಜನರು ಯಾರೂ ಇಲ್ಲ.

Sri ABDUL KHUDDUS ANWAR.—Will the Government conduct an enquiry and recover the amount of Rs. 15,000 which was illegally collected by the Chairman Sri Ramanna and utilise it for the uplift of the panchayat ?

Sri H. V. KOUJALGI.—I have already stated that the Sarpanch has sold this property in public auction and he must have taken the amount to the panchayat funds. It all depends upon the result of the suit.

Non-Utilisation of the New Hostel Building constructed for A.Ks. in Hassan

207. Sri H. B. JWALANAIAH (Hassan).—

Will the Minister for Social Welfare be pleased to state :—

(*a*) when the construction of the new aided Hostel Building for Adi-Karnatakas at Hassan was taken up ;

(*b*) the amount spent for its construction up to this time ;

(*c*) whether it has come to the notice of the Government that though the building was completed long back is still unoccupied ?

Sri V. L. PATIL (Minister for Social Welfare).—

(*a*) No building was taken up and constructed for the Aided Hostel at Hassan.

(*b*) Does not arise in view of reply to (*a*) above.

(*c*) Does not arise in view of reply to (*a*) above.

ಶ್ರೀ ಎಚ್. ಬಿ. ಜ್ವಾಲನಯ್ಯ.—ಹಾಸನದಲ್ಲಿ ಸುಮಾರು ಎಂಟು ವರ್ಷಗಳ ಹಿಂದೆ ಶ್ರೀ ಎನ್. ರಾಚಯ್ಯನವರು ಮಂತ್ರಿಗಳಾಗಿದ್ದಾಗ ಎರಡು ಲಕ್ಷ ಖರ್ಚು ಮಾಡಿ ಒಂದು ಹರಿಜನರ ಹಾಸ್ಟಲ್ ಕಟ್ಟಿಸಿರಲಿಲ್ಲವೇ ! ಇಲ್ಲಿಯವರೆಗೂ ಈ ಕಟ್ಟಡ ಉಪಯೋಗಕ್ಕೆ ಬಿಲ್ಲದೆ ಕತ್ತೆ, ನಾಯಿಗಳು ವಾಸ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಈಚೆಗೆ ಸರಕಾರದವರು ಆಕಾರದವನ ತುಂಬಲು ಉಪಯೋಗಿಸುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ !